**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**

**ಎಸ್.ಸಿ. ಸಂಃ 10006/2023**

ಪಿಡಬ್ಲೂ–13

ಸಿಡಬ್ಲೂ– 13

ಸಾಕ್ಷಿ ಹೆಸರು – ಮಹೇಶ್ ಟಿ

ತಂದೆ ಹೆಸರು – ಶಿವಲಿಂಗಪ್ಪ ಟಿ

ವಯಸ್ಸು – 45 ವರ್ಷ

ಉದ್ಯೋಗ – ಮುಖ್ಯ ಪೇದೆ , ಆನವಟ್ಟಿ ಪೋಲೀಸ್ ಠಾಣೆ

ವಾಸಃ – ಆನವಟ್ಟಿ

**ಪ್ರಮಾಣ ವಚನ ಭೋದಿಸಿದ ದಿನಾಂಕಃ 18–02–2026.**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ನಾನು 2016 ರಿಂದ ಜೂನ್ 2022 ರ ವರೆಗೆ ಸೊರಬ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ಮಾಡಿರುತ್ತೇನೆ.

ದಿನಾಂಕಃ 06–03–2022 ರಂದು ಸೊರಬ ಸರ್ಕಾರಿ ಆಸ್ಪತ್ರೆಯಿಂದ ಚಾಸಾ1 ರವರಿಗೆ ಹಲ್ಲೆಯಾಗಿ ಗಾಯ ಆಗಿ ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ಎಂ ಎಲ್ ಸಿ ಬಂದಿತ್ತು, ಆಗ ನಾನು ಸೊರಬ ಸರ್ಕಾರಿ ಆಸ್ಪತ್ರೆಗೆ ಹೋಗಿ, ಚಾಸಾ1 ರವರ ಹೇಳಿಕೆಯನ್ನು ವೈಧ್ಯರ

ಸಮಕ್ಷಮ ಪಡೆದುಕೊಂಡಿರುತ್ತೇನೆ. ಈಗ ತೋರಿಸಿದ ನಿಪಿ -1 ಸದರಿ ಹೇಳಿಕೆಯಾಗಿರುತ್ತದೆ. ನಂತರ ನಾನು ಚಾಸಾ1 ರವರು ನೀಡಿದ ಹೇಳಿಕೆಯನ್ನು ಠಾಣೆಗೆ ತೆಗೆದುಕೊಂಡು ಬಂದು ಠಾಣಾ ಮೊಕದ್ದಮೆ ಸಂಃ31/2022 ರಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಹಿರಿಯ ಅಧಿಕಾರಿಗಳಿಗೆ ನಿವೇಧಿಸಿಕೊಂಡಿರುತ್ತೇನೆ. ನಿಪಿ -1 ರಲ್ಲಿ ನನ್ನ ಸಹಿ ಇರುತ್ತದೆ. ನಿಪಿ -1 ರಲ್ಲಿ ಸಾಕ್ಷಿ ಬರೆದಿರುವ ಷರಾ ಮತ್ತು ಸಹಿಯನ್ನು ಒಟ್ಟಾಗಿ ನಿಪಿ -1(ಬಿ) ಎಂದು ಗುರುತಿಸಲಾಯಿತು. ಎಂ ಎಲ್ ಸಿ ಯನ್ನು ನೋಡುತ್ತಿದ್ದು ಅದನ್ನು ನಿಪಿ -21 ಎಂದು ಗುರುತಿಸಲಾಯಿತು. ಪ್ರ.ವ.ವರ್ತಮಾನ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ -22, ಸಾಕ್ಷಿಯ ಸಹಿಯನ್ನು ನಿಪಿ -22(ಎ) ಎಂದು ಗುರುತಿಸಲಾಯಿತು.

ದಿನಾಂಕಃ 07-03-2022 ರಂದು ಸ್ಥಳ ಪಂಚನಾಮೆ ಮಾಡಲು ಘಟನಾ ಸ್ಥಳವಾದ ಯಲಸಿ ಗ್ರಾಮದಲ್ಲಿರುವ ಚಾಸಾ1 ರವರ ಮನೆಯ ಹತ್ತಿರ ಹೋಗಿರುತ್ತೇನೆ. ಸ್ಥಳ ಪಂಚನಾಮೆ ಮಾಡಲು ಸಾಕ್ಷಿದಾರರಾದ ಚಾಸಾ2 ಮತ್ತು ಚಾಸಾ7 ಮತ್ತು 8 ರವರಿಗೆ ನೋಟೀಸ್ ನ್ನು ಜಾರಿ ಮಾಡಿರುತ್ತೇನೆ. ಈಗ ತೋರಿಸಿದ ನಿಪಿ -8 ಸದರಿ ನೋಟೀಸ್ ಆಗಿರುತ್ತದೆ. ನಿಪಿ -8 ರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ 8(ಡಿ) ಎಂದು ಗುರುತಿಸಲಾಯಿತು. ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ2 ಲೋಕೇಶ್ ರವರು ಸ್ಥಳವನ್ನು

ತೋರಿಸಿ ಇದೇ ಸ್ಥಳದಲ್ಲಿ ಆರೋಪಿತರು ಚಾಸಾ1 ಮಾಲತೇಶನಿಗೆ ಮತ್ತು ತನಗೆ ಹಲ್ಲೆ ಮಾಡಿದ ಸ್ಥಳ ಎಂದು ತೋರಿಸಿದ ಮೇರೆಗೆ ನಾನು ಸದರಿ ಸ್ಥಳವನ್ನು ಪರಿಶೀಲನೆ ಮಾಡಿ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಈಗ ತೋರಿಸಿದ ನಿಪಿ -5 ಸದರಿ ಸ್ಥಳ ಪಂಚನಾಮೆ ಆಗಿರುತ್ತದೆ. ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯಸಹಿಯನ್ನು ನಿಪಿ 5(ಡಿ) ಎಂದು ಗುರುತಿಸಲಾಯಿತು. ಸ್ಥ ಳ ಪಂಚನಾಮೆಯನ್ನು ಬೆಳಿಗ್ಗೆ 11-00 ಗಂಟೆಯಿಂದ ಮಧ್ಯಾಹ್ನ 12-00 ಗಂಟೆವರೆಗೆ ಮಾಡಿರುತ್ತೇನೆ. ಸ್ಥಳ ಪಂಚನಾಮೆ ಸಮಯದಲ್ಲಿ ಸ್ಥಳದಲ್ಲಿ ಬಿದ್ದಿದ್ದ ಕಂದ್ಲಿಯನ್ನು ಚಾಸಾ2 ರವರು ತೆಗೆದು ನನ್ನ ಮುಂದೆ ಹಾಜರುಪಡಿಸಿ ಸದರಿ ಕಂದ್ಲಿಯಿಂದ ಆರೋಪಿತರು ತನಗೆ ಮತ್ತು ಚಾಸಾ1 ರವರಿಗೆ ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿದ ಮೇರೆಗೆ ನಾನು ಸದರಿ ಕಂದ್ಲಿಯನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಕೃತ್ಯ ನಡೆದ ಸ್ಥಳದಲ್ಲಿ ನಕಾಶೆಯನ್ನು ತಯಾರು ಮಾಡಿರುತ್ತೇನೆ. ಈಗ ತೋರಿಸಿದ ನಕಾಶೆಯಲ್ಲಿ ನನ್ನ ಸಹಿ ಇರುತ್ತದೆ. ನಕಾಶೆಯನ್ನು ನಿಪಿ -23 ಎಂದು, ಸಾಕ್ಷಿಯ ಸಹಿಯನ್ನು ನಿಪಿ 23(ಎ) ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆ ಸಮಯದಲ್ಲಿ ಫೋಟೋಗಳನ್ನು ತೆಗೆಸಿರುತ್ತೇನೆ. ಈಗ ತೋರಿಸಿದ ನಿಪಿ 6 ಮತ್ತು ನಿಪಿ 7 ಸದರಿ ಫೋಟೋಗಳಾಗಿರುತ್ತವೆ.

ನಂತರ ಪ್ರತ್ಯಕ್ಷ ಸಾಕ್ಷಿಗಳಾದ ಚಾಸಾ-2 ಲೋಕೇಶ, ಚಾಸಾ- 6 ಪರಮೇಶ್ವರಪ್ಪ, ಚಾಸಾ-3 ಮಂಜುಳಾ, ಚಾಸಾ-4 ಶ್ರೀಧರ, ಚಾಸಾ-5 ಕನ್ನಪ್ಪ ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಠಾಣೆಗೆ ಬಂದು ಅಮಾನತ್ತು ಪಡಿಸಿಕೊಂಡ ಕಂದ್ಲಿಯನ್ನು ಠಾಣಾ ಮಾಲು ಪಟ್ಟಿ ಸಂಃ19/2022 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಸದರಿ ಕಂದ್ಲಿಯನ್ನು ನೋಡಿದರೆ ಗುರುತಿಸಬಲ್ಲೆ. ಈಗ ತೋರಿಸಿದ ಮು ಮಾ -4 ಕಂದ್ಲಿ ನಾನು ಅಮಾನತ್ತುಪಡಿಸಿಕೊಂಡ ಕಂದ್ಲಿಯಾಗಿರುತ್ತದೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ- 14 ದೇವರಾಯರವರಿಗೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಈ ಎನ್ ವಕೀಲರಿಂದಃ</u>**

ಆಸ್ಪತ್ರೆಯಲ್ಲಿ ನಾನು ಚಾಸಾ-2 ಲೋಕೇಶರವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ಚಾಸಾ 1 ರವರ ಹೇಳಿಕೆಯನ್ನು ಚಾಸಾ1 ರವರು ಹೇಳಿದ ರೀತಿ ತೆಗೆದುಕೊಂಡಿರುವುದಿಲ್ಲ, ನಮಗೆ ಬೇಕಾದ ರೀತಿ ನಾವು ಹೇಳಿಕೆಯನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಹೇಳಿಕೆ ದೂರು ನನ್ನ ಕೈ ಬರವಣಿಗೆಯಲ್ಲಿ ಇದೆ ಎಂದರೆ ಸರಿ. ನಿಪಿ -5 ಪಂಚನಾಮೆಯನ್ನು ಮುಖ್ಯ ಪೇದೆ ಪರಮೇಶ ರವರು ಬರೆದಿರುತ್ತಾರೆ. ನಿಪಿ -6 ಮತ್ತು 7 ಫೋಟೋದಲ್ಲಿ ಸದರಿ ಪರಮೇಶರವರು ಕಾಣುವುದಿಲ್ಲ ಎಂದರೆ ಸರಿ. ನಿಪಿ -23

ನಕಾಶೆಯನ್ನು ನಾನು ತಯಾರು ಮಾಡಿರುತ್ತೇನೆ. ನಿಪಿ -23 ರಲ್ಲಿ ಮಹಜರ್ ಸಮಯದಲ್ಲಿ ಹಾಜರಿದ್ದಂತಹ ಸಾಕ್ಷಿಗಳ ಸಹಿ ಇರುವುದಿಲ್ಲ ಎಂದರೆ ಸರಿ. ನಾನು ಹೇಳಿದ ರೀತಿ ಘಟನೆ ನಡೆಯಿತು ಎಂದು ಹೇಳಲಾದ ಸ್ಥಳದಲ್ಲಿ ಯಾವುದೇ ಸ್ಥಳ ಪಂಚನಾಮೆ ಮಾಡಿರುವುದಿಲ್ಲ ಮತ್ತು ನಿಪಿ 23 ನಕಾಶೆಯನ್ನು ಸ್ಥಳದಲ್ಲಿ ತಯಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 6 ಫೋಟೋವನ್ನು ಮೊದಲು ತೆಗೆದಿರುತ್ತೇವೆ. ನಂತರ ನಿಪಿ 7 ಫೋಟೋವನ್ನು ತೆಗೆದಿರುತ್ತೇವೆ. ಫೋಟೋಗಳನ್ನು ಮುಖ್ಯ ಪೇದೆ ಪರಮೇಶ ರವರು ಮೊಬೈಲ್ ನಿಂದ ತೆಗೆದಿರುತ್ತಾರೆ. ಪರಮೇಶರವರು ಯಾರ ಮತ್ತು ಯಾವ ಮೊಬೈಲ್ ನಿಂದ ಫೋಟೋಗಳನ್ನು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಕೃತ್ಯ ನಡೆಯಿತು ಎಂದು ಹೇಳಲಾದ ಸ್ಥಳದಲ್ಲಿ ಸದರಿ ಫೋಟೋಗಳನ್ನು ತೆಗೆಸಿರುವುದಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗಳ ಹೇಳಿಕೆಗಳನ್ನು ನಾನು ಸ್ಥಳದಲ್ಲಿ ತೆಗೆದುಕೊಂಡಿರುತ್ತೇನೆ. ನಾನು ಸ್ಥಳಕ್ಕೆ ಲ್ಯಾಪ್ ಟಾಪ್ ನ್ನು ತೆಗೆದುಕೊಂಡು ಹೋಗಿದ್ದೆ. ನಾನು ಸ್ಥಳಕ್ಕೆ ಲ್ಯಾಪ್ ಟಾಪ್ ತೆಗೆದುಕೊಂಡು ಹೋಗಿರಲಿಲ್ಲ, ತೆಗೆದುಕೊಂಡು ಹೋಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಪ್ರಿಂಟರ್ ನ್ನು ತೆಗೆದುಕೊಂಡು ಹೋಗಿರಲಿಲ್ಲ ಎಂದರೆ ಸರಿ. ನನಗೆ ಕನ್ನಡದಲ್ಲಿ ಬೆರಳಚ್ಚು ಮಾಡಲು ಬರುವುದಿಲ್ಲ. ಚಾಸಾ2 ರಿಂದ 6 ಸಾಕ್ಷಿಗಳ ಹೇಳಿಕೆಗಳನ್ನು ಕನ್ನಡದಲ್ಲಿ ಯಾರು ಬೆರಳಚ್ಚು ಮಾಡಿದರು ಎಂದರೆ ಸಾಕ್ಷಿ ಮುಖ್ಯ ಪೇದೆ

ಪರಮೇಶರವರು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಸಾಕ್ಷಿಗಳ ಹೇಳಿಕೆಯಲ್ಲಿ ಪರಮೇಶರವರು ಬೆರಳಚ್ಚು ಮಾಡಿರುತ್ತಾರೆ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿಗಳ ಹೇಳಿಕೆಯನ್ನು ಠಾಣೆಯಲ್ಲಿ ಮುದ್ರಣ ಮಾಡಿರುತ್ತೇನೆ. ನಾನು ಠಾಣೆಯಲ್ಲಿ ಮುದ್ರಣ ಮಾಡಬೇಕಾದರೆ ಸಾಕ್ಷಿಗಳು ಇರಲಿಲ್ಲ ಎಂದರೆ ಸಾಕ್ಷಿ ಇದ್ದರು ಎಂದು ಹೇಳುತ್ತಾರೆ. ಸಾಕ್ಷಿಗಳು ಸ್ಥಳದಲ್ಲೂ ಇರಲಿಲ್ಲ, ಠಾಣೆಯಲ್ಲೂ ಇರಲಿಲ್ಲ, ಅವರ ಹೇಳಿಕೆಗಳನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ನಿಜತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).